



ಅಂದ್ರು. 'ಹೊಸ ಶರ್ಟು, ಅದಕ್ಕೆ ಎತ್ತಿಟ್ಟೆ. ಇಲ್ಲಾಂದ್ರೆ ನೀವದನ್ನ ಬಿಡತಿದ್ರಾ?' ಅಂದೆ. ಮೇಕಪ್ ತೆಗೆದಾದಮೇಲೆ ಹೊರಡುವಾಗ ಮೇಕಪ್‌ಮ್ಯಾನ್‌ಗೆ, 'ಬಿಚ್ಚಿ ಕೊಟ್ಟು ಬಾರೋ' ಅಂದ್ರು. ಶ್ರೀನಿವಾಸ್ ಹಾಕಿಕೊಂಡಿದ್ದ ಶರ್ಟ್ ಬಿಚ್ಚತೊಡಗಿದರು. ಒಳಗೆ ಅವರ ಶರ್ಟ್ ಮೇಲಿದ್ದದ್ದು ನನ್ನ ಹೊಸ ಶರ್ಟ್. ಪೂರ್ತಿ ಬಣ್ಣದಲ್ಲಿ ಮುಳುಗಿದ್ದ ನನ್ನ ಶರ್ಟ್‌ನ್ನು ನಾನೇ ಗುರ್ತಿಸಿರಲಿಲ್ಲ. 'ನಮ್ಮತ್ರ ನಿನ್ನ ಬುದ್ಧಿವಂತಿಕೆ ನಡೆಯಲ್ಲಮ್ಮಾ' ಎಂದು ನಗುತ್ತಾ ಕಾರು ಹತ್ತಿದರು.

## ಗಡಿಯಾರದ ಹಂಗಿಲ್ಲದ ನಾಯಕ

ಅಂಬರೀಷ್ ಅವರ ಬಗ್ಗೆ ಇಡೀ ಚಿತ್ರರಂಗದವರು ಹೊರಗಿನವರು ಹೇಳುವ ಮಾತು, ಅವರು ಯಾವತ್ತೂ ಸಮಯಕ್ಕೆ ಸರಿಯಾಗಿ ಬರುತ್ತಿರಲಿಲ್ಲ ಎನ್ನುವುದು. ಅದು ನಿಜವೂ. ಅವರು ಮೊದಲೇ ಹೇಳಿರುತ್ತಿದ್ದರು, 'ನಾನು ಬರೋದೇ ತಡವಾಗಿ' ಅಂತ. ಕೆಲವರು ಅವರ ದಿನಚರಿಗೆ ಹೊಂದಿಕೊಂಡಂತೆ ಚಿತ್ರೀಕರಣವನ್ನು ಪ್ಲಾನ್ ಮಾಡುತ್ತಿದ್ದರು. ಅಂಥವರಿಗೆ ಯಾವ ತೊಂದರೆಯೂ ಆಗುತ್ತಿರಲಿಲ್ಲ. ನಾನು ನಿರ್ದೇಶಿಸಿದ 'ಮುಂಜಾನೆ ಮಂಜು', 'ಮುಸುಕು' ಚಿತ್ರಗಳು ನಾವು ಹಾಕಿಕೊಂಡ ಶೆಡ್ಯೂಲ್‌ಗಿಂತ ಒಂದು ದಿನ ಕೂಡ ಹೆಚ್ಚು ತೆಗೆದುಕೊಳ್ಳಲಿಲ್ಲ. ವಿಶೇಷ ಕಾರಣಗಳಿಗಾಗಿ ಮುಂಜಾವಿನಲ್ಲೇ ಚಿತ್ರೀಕರಿಸಬೇಕೆಂದಿದ್ದರೆ, ಅದನ್ನು ಅವರಿಗೆ ಮನದಟ್ಟು ಮಾಡಿಕೊಟ್ಟರೆ ಬೇಗನೆ ಬಂದಿದ್ದಾರೆ. ಬೆಳಗಿನ ಮಂಜಿನಲ್ಲಿ ಹಾಡಿನ ಚಿತ್ರೀಕರಣ ಮಾಡಿದರೆ ಚೆನ್ನಾಗಿರುತ್ತದೆಂದು 'ಮುಸುಕು' ಚಿತ್ರದ ಸಮಯದಲ್ಲಿ ಹೇಳಿದಾಗ, ಬಾಬಾಬುಡನ್‌ಗಿರಿ ಬೆಟ್ಟಕ್ಕೆ ಚಿಕ್ಕಮಗಳೂರಿನಿಂದ ಬೆಳಗಿನ ಏಳು ಗಂಟೆಗೆಲ್ಲ ಮೇಕಪ್‌ನೊಂದಿಗೆ ಚಿತ್ರೀಕರಣಕ್ಕೆ ಹಾಜರಾದದ್ದಿದೆ. ಅದೇ ಚಿತ್ರದ ಪ್ರಮುಖ ದೃಶ್ಯವೊಂದನ್ನು 'ಒಂದೇ ಹಂತದಲ್ಲಿ ಮುಗಿಸಬೇಕು, ಅದು ಮುಗಿಯಲು ಎಷ್ಟು ಹೊತ್ತಾಗುತ್ತದೋ ಹೇಳಲಾಗುವುದಿಲ್ಲ. ನೀವು ಹೂಂ ಅಂದರೆ ನಾನಂದುಕೊಂಡಂತೆ ಚಿತ್ರೀಕರಿಸುತ್ತೇನೆ. ಇಲ್ಲವೆಂದರೆ ದೃಶ್ಯ ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ' ಎಂದು ಹೇಳಿದ್ದಕ್ಕೆ, ಬೆಳಗಿನಿಂದ ಮಧ್ಯರಾತ್ರಿ ಎರಡು ಗಂಟೆಯವರೆಗೂ ಚಿತ್ರೀಕರಿಸಿದ ಉದಾಹರಣೆ ಇದೆ.

ಅವರು ಮನೆಯಲ್ಲಿ ಇರುತ್ತಿದ್ದುದು ಬಹಳ ಕಡಿಮೆ. ಮನೆಯಲ್ಲೇ ಇರುತ್ತಿದ್ದ ದಿನಗಳಲ್ಲಿ ಬೆಳಿಗ್ಗೆ ಹತ್ತೂವರೆ ಹನ್ನೊಂದು ಗಂಟೆ ಹೊತ್ತಿಗೆ ಎದ್ದು, ಅವರ ರೂಂನಿಂದ ಲಿಫ್ಟ್‌ನಲ್ಲಿ ಇಳಿದು ಬಂದ್ರು ಅಂದ್ರೆ ಅವರು ಕೂರುತ್ತಿದ್ದುದು ಡೈನಿಂಗ್ ಟೇಬಲ್ ಮುಂದೇನೆ. ದಿನದ ಎಲ್ಲ ಕೆಲಸಗಳೂ ಅಲ್ಲಿಂದಲೇ ಪ್ರಾರಂಭ ಆಗುತ್ತಿದ್ದವು. ಬಂದವರನ್ನೆಲ್ಲ ಡೈನಿಂಗ್ ಟೇಬಲ್ ಮುಂದೆ ಕೂರಿಸಿಕೊಂಡು, ತಿಂಡಿ ತಟ್ಟೆಗಳನ್ನು ಕೆಲಸದವರು ಬಂದವರ ಮುಂದೆ ತಂದಿಟ್ಟ ನಂತರವಷ್ಟೇ 'ಬಂದ ಕೆಲಸ ಏನು?' ಎಂದು ಕೇಳುತ್ತಿದ್ದುದು.

ಅದಕ್ಕೆ ಮೊದಲು ಬಂದವರು ಬಾಯಿ ತೆಗೆದರೆ, 'ಮೊದಲು ತಿಂಡಿ ತಿನ್ನೋ. ಆಮೇಲೆ ಅದೇನೂಂತ ಹೇಳುವೆಯಂತೆ' ಅನ್ನೋರು. ಆ ತಿಂಡಿಗಳಾದರೂ ಎಂಥವು – ಎಂಟಿಆರ್‌ನಿಂದ ದೋಸೆ ಬಂದಿರೋದು, ಎಸ್‌ಎಲ್‌ವಿ ಇಂದ ವಡೆ, ಇನ್ನೆಲ್ಲಿಂದಲೋ ಬಿರಿಯಾನಿ, ಮತ್ತೆಲ್ಲಿಂದಲೋ ಕಾಲು ಸೂಪು. 'ಅದು ಚೆನ್ನಾಗಿರುತ್ತೆ ಹಾಕೋ, ಇದನ್ನ ಇವರಿಗೆ ಹಾಕೋ' ಎಂದು ಕೆಲಸದವರಿಗೆ ಹೇಳ್ತಾ ಕಾರ್ಡ್‌ಲೆಸ್ ಫೋನ್‌ನಿಂದ ಬಂದ ಫೋನ್‌ಗಳನ್ನ ತಗೊಳ್ತಾ ಇಲ್ಲವೇ ಅಲ್ಲಿಗೆ ಬಂದಿದ್ದವರ ಕೆಲಸಗಳನ್ನ ಫೋನ್‌ನಲ್ಲೇ ಮಾತಾಡಿ ಮಾಡಿ ಮುಗಿಸೋರು. ಹೀಗೇ ಹನ್ನೆರಡೂವರೆ ಒಂದು ಗಂಟೆಯ ತನಕ ತಿಂಡಿ ಕಾರ್ಯಕ್ರಮ. ಸ್ನಾನ ಮುಗಿಸಿ ಬರೋ ಹೊತ್ತಿಗೆ ಊಟದ ಕಾರ್ಯಕ್ರಮ ಶುರು – ನಾಲ್ಕು ನಾಲ್ಕೂವರೆವರೆಗೂ. ಆನಂತರ ಅಂಬರೀಷ್ ಅವರು ರೆಡಿಯಾಗಿ ಹೊರಗೆ ಹೋಗೋರು. ಇದು ಅವರ ಬಿಡುವಿನ ದಿನದ ದಿನಚರಿ.

ನನ್ನ ಚಿತ್ರಗಳ ಶೂಟಿಂಗ್ ಸ್ಪಾಟ್‌ನಲ್ಲೂ ಎಂದೂ ಸ್ಕ್ರಿಪ್ಟ್ ಕೇಳಿದವರಲ್ಲ. 'ಮುಸುಕು' ಚಿತ್ರೀಕರಣದ ಸಮಯದಲ್ಲಿ ಅಶ್ವತ್ಥ್‌ರವರು ಹಿಂದಿನ ದಿನ ರಾತ್ರಿಯೇ ಹೋಟೆಲ್ ರೂಂನಲ್ಲಿ ಸ್ಕ್ರಿಪ್ಟ್ ಪಡೆದು ಸಿದ್ಧರಾಗಿ ಬರುತ್ತಿದ್ದರು. ಅಂಬರೀಷ್ ಅವರು ಮಾತ್ರ ಫುಲ್ ಸೀನ್‌ನ ನೋಡ್ತಾನೇ ಇರಲಿಲ್ಲ. ಸ್ಪಾಟಿಗೆ ಬಂದು ಆ ಶಾಟ್‌ನ ಡೈಲಾಗನ್ನು ಮಾತ್ರ ಒಮ್ಮೆ ಗ್ಲಾನ್ಸ್ ಮಾಡೋರು, ಅಷ್ಟೆ. ಅದು ಒಂದು ಡೈಲಾಗ್ ಇರ್ಲಿ, ಒಂದು ಪೇಜ್ ಇರ್ಲಿ, ಒಂದುವರೆ ಪೇಜ್ ಇರ್ಲಿ... ಒಂದು ಸಾರಿ ಮೇಲಿಂದ ಕೆಳಗೆ ಕಣ್ಣಾಡಿಸುತ್ತಿದ್ದುದಷ್ಟೆ. ಡೈರೆಕ್ಟಾಗಿ ಟೇಕ್ ಅನ್ನೋರು, ಅಂಥ ಜ್ಞಾಪಕ ಶಕ್ತಿ. ಅವರು ಯಾವತ್ತೂ ಡೈಲಾಗ್ ಬದಲಾಯಿಸಿ ಅಂತ ಕೇಳಿದವರಲ್ಲ, ಕೆಲವು ಪದಗಳು ಅವರಿಗೆ ಹೇಳೋಕೆ ಕಷ್ಟವಾದಾಗ 'ನನ್ನ ನಾಲಿಗೆ ತಿರುಗಲ್ಲ ಕಣ್ರಯ್ಯಾ. ಈ ಗೌಡನ ಬಾಯಲ್ಲಿ ಬರೋಂಥ ಮಾತುಗಳನ್ನ ಬರೀರಿ' ಅಂತ ಅಸಿಸ್ಟೆಂಟ್‌ಗಳ ಬಳಿ ಹೇಳೋರು. ಯಾವುದಾದರೂ ಶಾಟ್ ಐದಾರು ಟೇಕ್‌ಗಳಾದರೆ, ಕಟ್ ಹೇಳಿದ ತಕ್ಷಣ ನಾನು 'ಓಕೆ' ಅಂದ್ರೆ ಅವರಿಗೆ ಅನುಮಾನ ಬರೋದು. ಅಸಿಸ್ಟೆಂಟ್‌ಗಳನ್ನು ಕರೆದು 'ಓಕೇನಾ?' ಅಂತ ಕೇಳೋರು. 'ಡೈರೆಕ್ಟರ್ ಓಕೆ ಅಂದ್ರಲ್ಲಾ ಅಣ್ಣಾ' ಅಂತ ಅವರು ಹೇಳಿದರೆ, 'ಮತ್ಯಾಕೆ ಮುಖ ಹಂಗೆ ಮಾಡಿಕೊಂಡಿದ್ದಾರೆ, ಇನ್ನೊಂದು ಟೇಕ್ ಮಾಡೋಣಾಂತ ಹೇಳು' ಎನ್ನೋರು.

ಅವರು ಸಮಯಕ್ಕೆ ಸರಿಯಾಗಿ ಬರೋಲ್ಲ ಅಂತ ಗೊತ್ತಿದ್ದೂ ಅವರನ್ನ 'ಅರಗಿಣಿ' ಚಿತ್ರದ ಹಾಡುಗಳ ರೆಕಾರ್ಡಿಂಗ್ ಪೂಜೆಗೆ ಕರೆದಿದ್ದೆ. ಅಂದು ಅರ್ಧ ದಿನ ಆದರೂ ಪತ್ತೆ ಇಲ್ಲ. ಸಾಂಗ್ ರೆಡಿ ಮಾಡಿಕೊಂಡು ಕಾದ್ವಿ. ಕಡೆಗೆ ಬರೋಲ್ಲ ಅಂದುಕೊಂಡು ಬೈಕೊಂಡು ರೆಕಾರ್ಡಿಂಗ್ ಶುರು ಮಾಡಿದ್ವಿ. ಮುಗಿಯೋ ಹೊತ್ತಿಗೆ ಬಂದು ನಕ್ಕು ವಿಷ್ ಮಾಡಿ, 'ಊಟ ತರಿಸು' ಅಂತ ಹೇಳಿ ಬರೋವರೆಗೂ ಕಾದಿದ್ದು ಊಟ ಮಾಡಿಕೊಂಡು ಅವರು ಹೋದರಲ್ಲ – ಆ ಕೋಪ, ಬೇಸರ ಎಲ್ಲ ಕರಗಿಹೋಗಿತ್ತು. ಅಷ್ಟೆಲ್ಲ ಗೊತ್ತಿದ್ದರೂ ಮತ್ತೆ 'ರಂಗೋಲಿ' ಚಿತ್ರದ ಮುಹೂರ್ತಕ್ಕೆ ಕರೆದೆ. 'ಕ್ಲಾಪ್ ಮಾಡಬೇಕು' ಅಂದೆ. 'ಕಾಯಬೇಡ, ಬೇರೆಯವರನ್ನ ಇಟ್ಟುಕೊಂಡು ಮುಗಿಸು' ಅಂದ್ರು. ನಾನು ಹಟ ಹಿಡಿದೆ, ಬಲವಂತಕ್ಕೆ ಒಪ್ಪಿದರು. ಅವರ ಮನೆಯಿಂದ ಹೊರಡೋವಾಗ 'ಅರಗಿಣಿ ಟೈಂನಲ್ಲಿ ಬಂದಹಾಗೆ ಎಲ್ಲ ಮುಗಿದ ಮೇಲೆ ಬರಬೇಡಿ. ಕ್ಯಾಮೆರಾ ಸ್ವಿಚ್ ಆನ್‌ಗೆ ಡೈರೆಕ್ಟರ್ ಸಿದ್ದಲಿಂಗಯ್ಯ ಅವರು ಬರ್‍ತಾರೆ' ಅಂತ ಹೇಳಿ ಬಂದೆ. ಹಂಗಾದ್ರೂ ಸರಿಯಾದ ಸಮಯಕ್ಕೆ ಬರಬಹುದು ಅಂತ. ಅವರಿಗೆ ಹತ್ತೂವರೆ ಅಂತ ಹೇಳಿ ನಾನು ಹನ್ನೆರಡು ಗಂಟೆಗೆ ಮುಹೂರ್ತ ಇಟ್ಟುಕೊಂಡಿದ್ದೆ. ಆಗಲೂ ಬರಲಿಲ್ಲ. ಸಿದ್ದಲಿಂಗಯ್ಯನವರನ್ನು ಎಷ್ಟು ಹೊತ್ತು ಅಂತ ಕಾಯಿಸೋದು. ಕಡೆಗೆ ಅಲ್ಲಿ ಬಂದಿದ್ದ ಯಾರ ಹತ್ರಾನೋ ಕ್ಲಾಪ್ ಮಾಡಿಸಿ, ಅಲ್ಲಿ ಶೂಟ್ ಮಾಡಬೇಕಿದ್ದ ಸೀನ್ ಕೂಡ ಶೂಟ್ ಮಾಡಿ, ಊಟ ಮುಗಿಸಿ ಬೇರೆ ಕಡೆಗೆ ಶಿಫ್ಟ್ ಮಾಡಲು ಹೇಳಿ, ಒಂದು ಕಡೆಯಲ್ಲಿ ನಾನು ನಿರ್ಮಾಪಕ ಶೈಲೇಂದ್ರ ಬಾಬು ಇಬ್ಬರೇ ಕುಳಿತು ಮಾತಾಡುತ್ತಿದ್ದೆವು. ಪ್ರೊಡಕ್ಷನ್ ಹುಡುಗ ನಾವು ಕುಳಿತಿದ್ದ ಚೇರ್‌ಗಳನ್ನು ತೆಗೆದುಕೊಂಡು ಹೋಗಲು ಕಾಯುತ್ತಾ ನಿಂತಿದ್ದ. ಆ ಸಮಯದಲ್ಲಿ ಬಂತು ನೋಡಿ ಇವರ ಕಾರು. ಇಳಿದು ಬಂದವರೇ 'ಸಾರಿ ವಿಶ್ವ' ಎಂದು ಏನೋ ಕಾರಣ ಹೇಳಿದರು. ಅಲ್ಲಿದ್ದ ಪ್ರೊಡಕ್ಷನ್ ಹುಡುಗನಿಗೆ ಹೇಳಿ ಕಾಫಿ ತರಿಸಿಕೊಂಡು ನಮ್ಮೊಂದಿಗೆ ಕುಳಿತು ವಿಷ್ ಮಾಡಿ ಹೋದರು.

ಹೀಗೆ ಪ್ರತಿಯೊಂದಕ್ಕೂ ತಡವಾಗಿ ಬರುತ್ತಿದ್ದ ಸ್ನೇಹಜೀವಿ ಅಂಬರೀಷ್ ಅಂತಿಮಯಾತ್ರೆಗೆ ಮಾತ್ರ ಏಕೆ ಹಾಗೆ ಅವಸರದಲ್ಲಿ ಹೊರಟು ಹೋದರೋ...